Taking over of the Bangalore University by the Government of India

206. Sri H. B. JWALANIAH (Hassan).—

Will the Minister for Education be pleased to state :—

(*a*) whether any negotiation was going on between the Centre and the State Government to hand over the Bangalore University to the Central Government;

(*b*) if so, the condition contemplated in the negotiation ?

Sri N. M. KOTRABASAIAH SOGI (Deputy Minister for Education).—

(*a*) the State Government has requested the Government of India to take over the Bangalore University and to run it as a Central University. Government of India's decision in the matter is awaited.

(*b*) No conditions have been contemplated at present.

ಶ್ರೀ ಎನ್. ಎ. ಚನ್ನೇಗೌಡ.—ಹಿಂದೆ ಕೇಂದ್ರಸರ್ಕಾರದಲ್ಲಿ ಶಿಕ್ಷಣ ಮಂತ್ರಿಯವರಾಗಿದ್ದ ಶ್ರೀ ಚಾಗ್ಲಾರವರು ಬೆಂಗಳೂರು ವಿಶ್ವವಿದ್ಯಾನಿಯವನ್ನು ಕೇಂದ್ರ ವಿಶ್ವವಿದ್ಯಾನಿಲಯವನ್ನಾಗಿ ಮಾಡುತ್ತೇವೆಂದು ಭರವಸೆ ಕೊಟ್ಟದ್ದು, ಪತ್ರಿಕೆಗಳಲ್ಲೂ ಪ್ರಕಟವಾಗಿದೆ, ಸರ್ಕಾರದ ವಕ್ತಾರರೂ ಒಪ್ಪಿಕೊಂಡಿರುವುದು ಮತ್ತು ಹಾಲಿ ಮಂತ್ರಿಯಾಗಿರುವವರೂ ಹೇಳಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕೇಂದ್ರದ ವಿದ್ಯಾಮಂತ್ರಿಯಾಗಿದ್ದವರು ನಮ್ಮ ವಿಶ್ವವಿದ್ಯಾನಿಲಯದ ಪ್ರಾರಂಭೋತ್ಸವ ಮಾಡುವಾಗ ಈ ಬಗ್ಗೆ ಆಶ್ವಾಸನೆ ಕೊಟ್ಟದ್ದು ನಿಜ. ಅದೇ ಉದ್ದೇಶದಿಂದ ಬೆಂಗಳೂರಿನಲ್ಲಿ ಆ ವಿಶ್ವವಿದ್ಯಾನಿಲಯ ಸ್ಥಾಪಿಸಲಾಯಿತು. ಈ ಬಗ್ಗೆ ಕೇಂದ್ರಸರ್ಕಾರದವರೊಡನೆ ಪತ್ರ ವ್ಯವಹಾರ ಮಾಡಿದ್ದೇವೆ, ಅದನ್ನು ಪ್ಲಾನಿಂಗ್ ಕಮಿಶನಿನವರು ಒಪ್ಪಬೇಕು, ಯು. ಜಿ. ಸಿಯವರು ಒಪ್ಪಬೇಕು. ಪತ್ರವ್ಯವಹಾರ ನಡೆಯುತ್ತಿದೆ. ಈ ಮಧ್ಯೆ ಕೆಲವು ದಿನಗಳ ಕೆಳಗೆ, ಉಪಪ್ರಧಾನಿಯಾಗಿದ್ದವರು ಮೊನ್ನೆ ನಮ್ಮ ಮುಖ್ಯ ಮಂತ್ರಿಯವರಿಗೆ ಪತ್ರ ಬರೆದಿದ್ದಾರೆ ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು. ಅದಕ್ಕೆ ಯು. ಜಿ. ಸಿ. ಯ ಕಮಿಟಿ ನೇಮಕ ಮಾಡಿ ಅದರ ತೀರ್ಮಾನಕ್ಕೆ ಬಿಟ್ಟಿದ್ದಾರೆ. ಅದ್ದರಿಂದ ಅದು ಇನ್ನೂ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಚ್ ಬಿ. ಜ್ವಾಲನಯ್ಯ.—ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡುವುದರಿಂದ ನಮ್ಮ ಸರ್ಕಾರಕ್ಕೆ ಆಗುವಂತಹ ಅನುಕೂಲಗಳು ಏನು, ಮತ್ತು ನಮ್ಮ ನಾಡಿನಲ್ಲರುವಂತಹ ವಿದ್ಯಾರ್ಥಿಗಳ ಪ್ರವೇಶಕ್ಕೆ, ಇದರಿಂದ ಅಡಚಣೆ ಬರುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮೊದಲು ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಿದ್ದು ಕೇಂದ್ರ ವಿಶ್ವವಿದ್ಯಾನಿಲಯ ಮಾಡಬೇಕೆಂದು. 63ಲಕ್ಷದ 34 ಸಾವಿರ ರೂಪಾಯಿ ವಿಶ್ವವಿದ್ಯಾನಿಲಯ ವ್ಯವಸ್ಥೆಗೆ ಖರ್ಚಾಗತಕ್ಕ ವೆಚ್ಚ. ಅದನ್ನು ಕೇಂದ್ರಸರ್ಕಾರದವರು ವಹಿಸಿದರೆ, ಅಷ್ಟು ಹಣ ನಮ್ಮ ಸರ್ಕಾರಕ್ಕೆ ಉಳಿತಾಯವಾಗುತ್ತದೆ. ಮತ್ತು ಅಖಿಲಭಾರತ ಪ್ರಾತಸ್ಯ ಅದಕ್ಕೆ ಇರುತ್ತದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರಕ್ಕೆ ಕೊಟ್ಟರೆ, ಇಲ್ಲಿ ಹಿಂದಿಯನ್ನು ಮಾಧ್ಯಮವಾಗಿ ಮಾಡಿದ ಸಂದರ್ಭದಲ್ಲಿ ನಿಮ್ಮ ಪಾತ್ರವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥ ಯಾವ ಒಂದು ವಿಚಾರ, ಯಾವ ಒಂದು ಡಿಟೈರ್ಸ್ ಗೊತ್ತಾಗಿಲ್ಲ. ಭಾರತಕ್ಕೆ ಸಂಬಂಧಪಟ್ಟ ರಾಜ್ಯಾಂಗದಲ್ಲಿ ಅಳವಡಿಸಲಾದ ಎಲ್ಲಾ ಭಾಷೆಗಳಲ್ಲಿಯೂ ಶಿಕ್ಷಣ ಸೌಕರ್ಯ ಒದಗಿಸಿ ಕೊಡಬೇಕೆಂದು ಇದೆ.

ಶ್ರೀ ಎನ್. ಎ. ಜನ್ನೇಗೌಡ.—ಬೆಂಗಳೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಪದವೀಧರರು ಕೆಲವು ಕೆಲಸಗಳಿಗೆ ಅರ್ಜಿಗಳನ್ನು ಸಲ್ಲಿಸಬಾರದು ಎಂದು ಹೇಳಿರುವುದರಿಂದ ಇಲ್ಲಿಯ ವಿದ್ಯಾ ಮಟ್ಟ ಕಡಿಮೆ ಇದೆ, ಎಂಬುದರಿಂದ, ಕೇಂದ್ರ ಸರ್ಕಾರದವರು ಇದನ್ನು ವಹಿಸಿಕೊಳ್ಳುವುದಕ್ಕೆ ಮುಂದೆ ಬರುತ್ತಾ ಇಲ್ಲ. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು, ಮತ್ತು ಕೇಂದ್ರ ಸರ್ಕಾರದವರು ಇದನ್ನು ವಹಿಸಿಕೊಳ್ಳುವುದಕ್ಕೆ ನಿರಾಕರಿಸುತ್ತಾರೆ ಎಂಬುದಕ್ಕೆ ಕೂಡ ನಿಮ್ಮ ಅಭಿಪ್ರಾಯವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥಾ ವಿಷಯ ಸರ್ಕಾರಕ್ಕೆ ತಿಳಿದು ಬಂದಿಲ್ಲ. ಅದನ್ನು ಒಪ್ಪುವುದಕ್ಕೆ ಸಿದ್ಧವಿಲ್ಲ.

Sri SIDDAIAH KASHIMATH.—The State Government has requested the Government of India to take over the Bangalore University. May I know the reasons given by the State Government for this taking over ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ನಾನು ಹೇಳಿದ್ದೇನೆ. ಇದನ್ನು ಕೇಂದ್ರದ ಯೂನಿವರ್ಸಿಟಿಯಾಗಿ ಪರಿವರ್ತನೆ ಮಾಡುವುದರಿಂದ ಸರ್ಕಾರಕ್ಕೆ ಹಣ ಉಳಿತಾಯ ಆಗುತ್ತದೆ. ಅಷ್ಟೇ ಅಲ್ಲ, ದಕ್ಷಿಣ ಭಾರತದಲ್ಲಿ ಕೇಂದ್ರದ ವಿಶ್ವವಿದ್ಯಾನಿಲಯ ಯಾವುದೂ ಇಲ್ಲ. ಬೆಂಗಳೂರು ಪ್ರಸಿದ್ಧವಾದ ಸ್ಥಳ. ಆದಕಾರಣ ಇಲ್ಲಿ ಒಂದು ಕೇಂದ್ರದ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಕೇಂದ್ರದ ಶಿಕ್ಷಣ ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಈ ದೃಷ್ಟಿಯಿಂದ ಇದನ್ನು ಕೇಂದ್ರದ ವಿಶ್ವವಿದ್ಯಾನಿಲಯವಾಗಿ ಪರಿವರ್ತನೆ ಮಾಡುವುದರಿಂದ ನಮ್ಮ ಸರ್ಕಾರಕ್ಕೆ ಹಣ ಉಳಿತಾಯವಾಗುತ್ತದೆ ಮತ್ತು ಅಖಿಲಭಾರತ ಮಟ್ಟದ ಒಂದು ಧಾತಿ ಈ ವಿಶ್ವವಿದ್ಯಾನಿಲಯಕ್ಕೆ ಇರುತ್ತದೆ ಎನ್ನುವ ಉದ್ದೇಶದಿಂದ ಇದನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳ ಬೇಕು ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಾರಂಭವಾದಾಗಿನಿಂದಲೂ ಇದನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವ ನೀರೀಕ್ಷೆ ಇದೆ. ಮತ್ತು ಇದನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವ ಬಗ್ಗೆ ಹಿಂದೆ ಅವರಿಂದ ಆಶ್ವಾಸನೆ ಕೂಡ ಬಂದಿದೆ. ಆದರೆ ಈಗ ಅದನ್ನು ಅವರು ವಹಿಸಿಕೊಳ್ಳುತ್ತಾರೆಯೋ ಇಲ್ಲವೋ ಎನ್ನುವ ಡೋಲಾಯಮಾನವಾದ ಸ್ಥಿತಿ ಇದೆ. ಇದರಿಂದ ಈ ವಿಶ್ವವಿದ್ಯಾನಿಯದ ಬೆಳವಣಿಗೆಗೆ ಅತಂಕ ಉಂಟಾಗಿದೆ. ಆದ್ದರಿಂದ ಎಷ್ಟು ಪರಮಾವಧಿಕಾಲದಲ್ಲಿ ಇದನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವ ನಿರ್ಣಯವಾಗ ಬಹುದು ಎಂದು ತಾವು ನಿರೀಕ್ಷೆ ಮಾಡುತ್ತೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ಸಂಪೂರ್ಣವಾಗಿ ಕೇಂದ್ರ ಸರ್ಕಾರಕ್ಕೆ ಬಿಟ್ಟ ವಿಷಯ. ಪ್ಲಾನಿಂಗ್ ಕಮೀಷನಿನವರು, ಯೂನಿವರ್ಸಿಟಿ ಗ್ರಾಂಟ್ ಕಮೀಷನ್ನಿನವರು ಮತ್ತು ಕೊಠಾರಿ ಕಮೀಷನ್ನಿನವರು ಈ ವಿಶ್ವವಿದ್ಯಾನಿಲಯವನ್ನು ಕೇಂದ್ರಕ್ಕೆ ವಹಿಸಿಕೊಡುವ ಬಗ್ಗೆ ಆಶಾದಾಯಕವಾದ ವರದಿಯನ್ನು ಕೊಡುತ್ತಾರೆಯೇ ಹೇಗೆ ಎಂಬುದನ್ನು ನೋಡಬೇಕಾಗಿದೆ. ಆದರೆ ಈ ಯೂನಿವರ್ಸಿಟಿಯ ಬೆಳವಣಿಗೆಯ ಬಗ್ಗೆ ಯಾವ ಆತಂಕವೂ ಉಂಟಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಶ್ವವಿದ್ಯಾನಿಲಯವನ್ನು ಕೇಂದ್ರ ಸರ್ಕಾರದವರಿಗೆ ವಹಿಸಿಕೊಟ್ಟ ಮೇಲೆ ಅದರಲ್ಲಿ ಅಡ್ಮಿಷನ್ಸ್ ಇತ್ಯಾದಿಗಳು ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಡುತ್ತೆವೆಯೇ ಅಥವಾ ಮೈಸೂರು ಸರ್ಕಾರದ ಅಧೀನದಲ್ಲಿಯೇ ಇರುತ್ತವೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ವಿವರಗಳ ಬಗ್ಗೆ ಇನ್ನೂ ವಿಚಾರ ಮಾಡಿಲ್ಲ. ಕೇಂದ್ರ ಸರ್ಕಾರದವರು ಈ ವಿಶ್ವವಿದ್ಯಾನಿಲಯವನ್ನು ವಹಿಸಿಕೊಂಡ ನಂತರ ಮುಂದಿನ ಕಾರ್ಯ ನಿರ್ವಹಣೆ ಏನು ಎಂಬುದನ್ನು ವಿಚಾರಣೆ ಮಾಡಬೇಕಾಗುತ್ತದೆ.

ಶ್ರಿ ಎಂ. ಎಸ್. ಕೃಷ್ಣನ್.—ಬೆಂಗಳೂರು ವಿಶ್ವವಿದ್ಯಾನಿಲಯದ ಆದಳಿತದ ಬಗ್ಗೆ ವಿದ್ಯಾರ್ಥಿಗಳು ಒಂದು ದೊಡ್ಡ ಪ್ರತಿಭಟನೆಯನ್ನು ನಡೆಸಿ ಅದರಲ್ಲಿ ಲಂಚಗುಳಿತನ, ಸ್ವಜನಪಕ್ಷಪಾತ ಮತ್ತು ಕೋಮುವಾರು ಭಾವನೆ ನಡೆಯುತ್ತಿದೆ ಎಂದು ತಮಗೆ ಮನವಿಯನ್ನು ಕಳುಹಿಸಿದ್ದು ಗೊತ್ತಿದೆಯೇ ? ಮತ್ತು ಕೇಂದ್ರ ಸರ್ಕಾರದವರು ಈ ವಿಶ್ವವಿದ್ಯಾನಿಲಯವನ್ನು ತೆಗೆದುಕೊಳ್ಳುವಂತೆ ಒತ್ತಾಯ ಮಾಡಿರುವುದು ತಮಗೆ ಗೊತ್ತಿದೆಯೇ ? ಈ ಬಗ್ಗೆ ಸರಿಯಾದ ಕ್ರಮವನ್ನು ತಾವು ತೆಗೆದು ಕೊಂಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಪ್ರಶ್ನೆಗೂ ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೂ ಸಂಬಂಧವಿಲ್ಲ. ಕೇಂದ್ರ ಸರ್ಕಾರದವರು ಇದನ್ನು ವಹಿಸಿಕೊಳ್ಳಬೇಕು ಎಂದು ಯಾವ ತರಹ ಒತ್ತಾಯ ಮತ್ತು ಚಳುವಳಿ ಇದುವರೆಗೂ ನಡೆದಿಲ್ಲ.

Sri B. B. SAYANAK.—May I know whether Dr. V.K.R.V. Rao, Union Education Minister, who belongs to Mysore, has suggested that the Bangalore University should be run by the Centre ?

Sri N. M. KOTRABASAIAH SOGI.—We do not have any official information in that behalf.

Sri A. R. BADARINARAYAN.—If the Bangalore University is taken over by the Centre, what will be the special advantages as also the disadvantages accruing therefrom ?

Sri N. M. KOTRABASAIAH SOGI.—Sir, I have already stated that details are yet to be worked out. It has to be first decided whether the Central Government is prepared to take it over or not.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಈ ವಿಶ್ವವಿದ್ಯಾ ನಿಲಯವನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವ ಬಗ್ಗೆ ಪತ್ರವ್ಯವಹಾರವನ್ನು ನಡೆಸಿದ್ದಾರೆ ಎಂದು ಹೇಳಿದ್ದಾರೆ. ಹಾಗಾದರೆ ಈ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಒಂದು ಮಹಾ ವಿಶ್ವವಿದ್ಯಾನಿಲಯವನ್ನಾಗಿ ಮಾಡತಕ್ಕಂಥ ಕಾರ್ಯದಲ್ಲಿ ಕೇಂದ್ರ ಸರ್ಕಾರದವರು ಏನಾದರೂ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ ಆ ಪ್ರಯತ್ನದಲ್ಲಿ ಮುಂದುವರಿದಿದ್ದಾರೆಯೇ, ಆ ವಿಚಾರ ತಮಗೆ ಗೊತ್ತಿದೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕೇಂದ್ರ ಸರ್ಕಾರದವರು ಈ ವಿಷಯವನ್ನು ಯೂನಿವರ್ಸಿಟಿ ಗ್ರಾಂಟ್ ಕಮೀಷನ್ನಿನವರ ಅಭಿಪ್ರಾಯದಮೇರೆ ಒಂದು ಉಪನಮಿತಿಗೆ ಒಪ್ಪಿಸಿದ್ದಾರೆ. ಅದ್ದರಿಂದ ನಾವು ಆ ಸಮಿತಿಯವರ ವರದಿಯನ್ನು ಕಾದು ನೋಡುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಾರಂಭದಲ್ಲೇ ಕೇಂದ್ರಸರ್ಕಾರದವರು ಈ ವಿಶ್ವವಿದ್ಯಾನಿಲಯವನ್ನು ವಹಿಸಿಕೊಳ್ಳುವ ಅಭಿಪ್ರಾಯ ಇತ್ತು. ಈ ವಿಚಾರ ನಮ್ಮೆಲ್ಲರಿಗೂ ಗೊತ್ತಿದೆ. ಇದಕ್ಕೆ 60 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರೆ. ಇಂಥಾ ಸಂದರ್ಭ ಇರುವಾಗ ಈ ವಿಶ್ವವಿದ್ಯಾನಿಲಯದಲ್ಲಿ ಅನೇಕ ಹುದ್ದೆಗಳಿಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವಾಗ ಮತ್ತು ವಿದ್ಯಾರ್ಥಿಗಳನ್ನು ಕಾಲೇಜಿಗೆ ಅಡ್ಮಿಟ್ ಮಾಡುವಾಗ ಕೇಂದ್ರ ಸರ್ಕಾರದವರ ನೀತಿ ಏನು ಎಂಬುದನ್ನು ತಿಳಿದುಕೊಂಡು ಅದರಂತೆ ನೇಮಕಗಳನ್ನು ಮಾಡಿದ್ದೀರಾ ? ಮತ್ತು ಅವರ ತತ್ವಕ್ಕೆ ವಿರುದ್ಧವಾಗಿ ನೇಮಕಗಳನ್ನು ಮಾಡಲಾಗಿದೆ ಎಂದೇನಾದರೂ ಅವರು ಪ್ರತಿಕ್ರಿಯೆಯನ್ನು ತಿಳಿಸಿದ್ದಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಈ ಪ್ರಶ್ನೆಗೆ ಸಂಬಂಧಪಡುತ್ತದೋ ಇಲ್ಲವೋ ಎಂಬುದು ಗೊತ್ತಿಲ್ಲ. ವಿಶ್ವವಿದ್ಯಾನಿಲಯದವರು ಮಾಡಿಕೊಳ್ಳುವ ನೇಮಕಗಳ ಬಗೆ ರಾಜ್ಯ ಸರ್ಕಾರದವರಾಗಲೀ, ಕೇಂದ್ರಸರ್ಕಾರದವರಾಗಲೀ ಪ್ರವೇಶ ಮಾಡುವುದಕ್ಕೆ ಅವಕಾಶವಿಲ್ಲ. ಅದಕ್ಕೆ ಬೇರೆ ನಿಯಮಗಳು ಇವೆ. ಅದರ ಪ್ರಕಾರ ಅವರು ನೇಮಕಗಳನ್ನು ಮಾಡುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರಸರ್ಕಾರದವರು ಕೇಂದ್ರ ವಿಶ್ವವಿದ್ಯಾನಿಲಯವಾಗಿ ನಡೆಸುವುದಕ್ಕಾಗಿ ನಮ್ಮ ಸರ್ಕಾರದವರು ಪತ್ರವ್ಯವಹಾರ ನಡೆಸಿದ್ದಾರೆಂದು ಈಗ ಹೇಳಿದಿರಿ. ಆ ರೀತಿ ಪತ್ರವ್ಯವಹಾರ ನಡೆಸುವಾಗ ಅಡ್ಮಿಷನ್ ವಿಷಯದಲ್ಲಿ, ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ವಿಷಯದಲ್ಲಿ, ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಏನಾದರು ಷರತ್ತುಗಳನ್ನು ಹಾಕಿ ಪತ್ರವ್ಯವಹಾರ ನಡೆಸಿದ್ದೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ಷರತ್ತುಗಳು ಏನಿಲ್ಲ. ಕೇಂದ್ರ ಸರ್ಕಾರದವರು ನಡೆಸುವುದಾದರೆ ನಮ್ಮ ಸರ್ಕಾರಕ್ಕೆ ಸುಮಾರು 63 ಲಕ್ಷ ರೂಪಾಯಿಗಳಷ್ಟು ಉಳಿತಾಯವಾಗುತ್ತದೆ. ಈಗ ಈ ವಿಶ್ವವಿದ್ಯಾನಿಲಯದ ಹೊಸ ಕ್ಯಾಂಪಸ್‌ಗಾಗಿ 15 ಕೋಟಿ ರೂಪಾಯಿಗಳಷ್ಟನ್ನು ನಮ್ಮ ಸರ್ಕಾರದವರು ಖರ್ಚು ಮಾಡಬೇಕಾಗಿದೆ. ಕೇಂದ್ರಸರ್ಕಾರದವರು ವಹಿಸಿಕೊಂಡರೆ ಈ ಹಣ ಉಳಿತಾಯವಾಗುತ್ತದೆ. ಅಲ್ಲದೆ ದಕ್ಷಿಣಭಾರತದಲ್ಲಿ ಕೇಂದ್ರ ವಿಶ್ವವಿದ್ಯಾನಿಲಯ ಇಲ್ಲದಿರುವುದರಿಂದ ಈ ವಿಶ್ವವಿದ್ಯಾನಿಲಯವನ್ನು ಕೇಂದ್ರದವರು ವಹಿಸಿಕೊಂಡರೆ ಆ ಒಂದು ಹೆಮ್ಮೆ ಬೆಂಗಳೂರಿನದ್ದಾಗುತ್ತದೆ. ಮತ್ತು ಮೈಸೂರಿಗೆ ಒಂದು ಕೀರ್ತಿ ಬರುತ್ತದೆಂಬ ದೃಷ್ಟಿಯಿಂದ ಕೇಂದ್ರಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದೇವೆ

ಶ್ರೀ ಎಚ್. ಬಿ. ಜ್ಯಾಲನಯ್ಯ.—ಈ ವಿಶ್ವವಿದ್ಯಾನಿಲಯವನ್ನು ಕೇಂದ್ರ ವಿಶ್ವವಿದ್ಯಾನಿಲಯವಾಗಿ ಕೇಂದ್ರಸರ್ಕಾರದವರು ಮಾಡಿದರೆ ವಿಶ್ವವಿದ್ಯಾನಿಲಯದ ಅಂತಸ್ತು ಹೆಚ್ಚುತ್ತದೆ ಎಂದು ಮಾನ್ಯ ಉಪಮಂತ್ರಿಗಳು ಹೇಳಿದರು. ಅಂದರೆ ಈಗ ಇರುವಂತಹ ಅಂತಸ್ತು ಕಡಿಮೆಯಾಗಿದೆ, ವಿಶ್ವವಿದ್ಯಾನಿಲಯದ ಮಟ್ಟ ಕೆಳಗೆ ಹೋಗಿದೆ ಎಂದು ಅರ್ಥವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಆ ರೀತಿ ಹೇಳಲಿಲ್ಲ. ಕೇಂದ್ರ ಸರ್ಕಾರದವರು ವಹಿಸಿಕೊಂಡರೆ ಈ ವಿಶ್ವವಿದ್ಯಾನಿಲಯ ಅಖಿಲಭಾರತದ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ವಿಶ್ವವಿದ್ಯಾನಿಲಯದ ಹೊಸ ಕ್ಯಾಂಪಸ್‌ಗೆ 15 ಕೋಟಿ ರೂಪಾಯಿಗಳ ಖರ್ಚು ಆಗುತ್ತದೆ ಎಂದು ಹೇಳಿದಿರಿ. ಈ ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆಂದು ತಿಳಿದುಕೊಂಡು ಹೊಸ ಕ್ಯಾಂಪಸ್‌ನಲ್ಲಿ ಫೌಂಡೇಷನ್ ಹಾಕಿಸಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ಉದ್ದೇಶದಿಂದ ಫೌಂಡೇಷನ್ ಹಾಕಿಸಿಲ್ಲ. ಈಗಾಗಲೇ ಹೊಸ ಕ್ಯಾಂಪಸ್‌ನಲ್ಲಿ ಕೆಲಸ ನಡೆದಿದೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರಸರ್ಕಾರ ವಹಿಸಿಕೊಂಡರೆ ಈ ವಿಶ್ವವಿದ್ಯಾನಿಲಯವನ್ನು ಇನ್ನೂ ಹೆಚ್ಚು ಅಭಿವೃದ್ಧಿಪಡಿಸುವುದಕ್ಕೆ ಅವಕಾಶವಾಗುತ್ತದೆಂಬ ಅಭಿಪ್ರಾಯ ಇದೆ.

Appointment of Assistant Public Prosecutors in Gulbarga Division

70. Sri SADASHIVAPPA PATIL (Deodurg).—

Will the Chief Minister be pleased to state :—

(*a*) the number of Sub-Inspectors of Police who are working as Assistant Police Prosecutors in Munsiff Court in Gulbarga Division ;

(*b*) the reasons for not appointing the Assistant Public Prosecutors?

Sri VEERENDRA PATIL (Chief Minister).—

(*a*) Four Police Sub Inspectors are working as Assistant Public Prosecutors in Munsiff Courts in Gulbarga Division.

(*b*) The Assistant Public Prosecutors are to be appointed by direct recruitment through the Public Service Commission as per the Mysore Assistant Public Prosecutors Service (Recruitment) Rules, 1967. While the 4 posts mentioned in reply to clause (*a*) have been notified to the Public Service Commission, action in the meanwhile, has also been initiated to fill up these posts temporarily pending recruitment through the Public Service Commission, from Members of the Bar possessing prescribed qualifications.

ಶ್ರೀ ಸದಾಶಿವಪ್ಪ ಪಾಟೀಲ್.—ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಅವರುಗಳನ್ನು ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಬೇಕಾಗುತ್ತದೆಂದು ತಿಳಿಸಿದ್ದೀರಿ. ಈಗ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಖಾಲಿ ಇರುವ ನಾಲ್ಕು ಜಾಗಗಳನ್ನು ಪಿ. ಎಸ್. ಸಿ. ಮೂಲಕ ನೇಮಕ ಮಾಡಧಿರುವುದಕ್ಕೆ ಕಾರಣವೇನು ?

†ಶ್ರೀ ವೀರೇಂದ್ರ ಪಾಟೀಲ್.—ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಇವರುಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಡಿವಿಜನಲ್ ಕಮಿಷನರ್ ಅವರಿಗೆ ಅಧಿಕಾರ ಇದೆ. ಪಿ. ಎಸ್. ಸಿ. ಮೂಲಕ ನೇಮಕವಾಗುವುದು ತಡವಾದರೆ ಡಿವಿಜನಲ್ ಕಮಿಷನರ್ ಅವರು ತಾತ್ಕಾಲಿಕವಾಗಿ ನೇಮಕ ಮಾಡುತ್ತಾರೆ. ಪಿ. ಎಸ್. ಸಿ. ಅವರು ನೇಮಕ ಮಾಡಿದ ಮೇಲೆ ಆ ಜಾಗಗಳು ಪರ್‌ಮನೆಂಟ್ ಆಗುತ್ತವೆ.

†Indicates that the remarks or speeches have not been revised by the member concerned.